ಕಥೆ

# ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ



**ಕಲ್ಲೇಶ್ ಕುಂಬಾರ್**

ಕಲೆ: ವಿಶ್ವನಾಥ್ ಎ.ಎಸ್.

## ಮಾಯೆ: ಒಂದು

ಹೊತ್ತು ಮುಳುಗುತ್ತಿತ್ತು!

ಊರ ಹೊರಗಿರುವ ವಿರಕ್ತ ಮಠದ ಆವರಣದಲ್ಲಿ ಹಾಕಲಾಗಿದ್ದ ವೇದಿಕೆಯ ಮುಂದೆ ಜನರು ನಿಧಾನವಾಗಿ ಬಂದು ಸೇರುತ್ತಿದ್ದರು. ಅಂದು ಶ್ರಾವಣ ಮಾಸ ಪ್ರಾರಂಭದ ಮೊದಲ ದಿನ. ಅದರ ನಿಮಿತ್ತವಾಗಿ ಪ್ರತೀ ವರ್ಷದಂತೆ ಈ ವರ್ಷವೂ ಸಹ ಮಠದ ಈಗಿನ ಪೀಠಾಧಿಪತಿಗಳಾಗಿರುವ ಪಂಚಯ್ಯಸ್ವಾಮಿಗಳು ತಿಂಗಳು ಪರ್ಯಂತ 'ಬಸವ ಪುರಾಣ'ವನ್ನು ನಡೆಸಿಕೊಡಲಿದ್ದರು. ಇದರ ಮೊದಲ ದಿನದ ಉದ್ಘಾಟನಾ ಸಮಾರಂಭಕ್ಕೆ ಆಡಳಿತಾರೂಢ ಪಕ್ಷದಲ್ಲಿ ಮಂತ್ರಿಯಾಗಿರುವ ಈ ಕ್ಷೇತ್ರದ ಎಂಎಲ್ಎ ಶರಣಪ್ಪ ಅತಿಥಿಯಾಗಿ ಆಗಮಿಸಲಿದ್ದರು. ಈ ಸಲ ಶ್ರಾವಣ ಮಾಸದಲ್ಲಿ ಪಂಚಯ್ಯಸ್ವಾಮಿಗಳು 'ಬಸವ ಪುರಾಣ'ವನ್ನು ನಡೆಸಿಕೊಡಲಿರುವ ಬಗ್ಗೆ ಮೊದಲೇ ನಿಗದಿಯಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಅವರು ಹದನಿಪ್ಪತ್ತು ದಿನಗಳಿಂದ ಸಾಕಷ್ಟು ತಯಾರಿಯನ್ನು ಸಹ ಮಾಡಿಕೊಂಡಿದ್ದರು. ಅಂತೆಯೇ, ಉದ್ಘಾಟನಾ ಸಮಾರಂಭದಲ್ಲಿ 'ಬಸವ ಪುರಾಣ'ಕ್ಕೆ ಪೀಠಿಕೆಯಾಗಿ ಅಧ್ಯಾತ್ಮಕ್ಕೆ ಸಂಬಂಧಿಸಿದ ಮಾತುಗಳನ್ನಾಡಲಿದ್ದರು. ಆ ಮೂಲಕ 'ಬಸವ ಪುರಾಣ'ದ ಮೊದಲ ಅಧ್ಯಾಯವನ್ನು ಶುರು ಮಾಡಲಿದ್ದರು. ಹೀಗಾಗಿ, ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಪಂಚಯ್ಯಸ್ವಾಮಿಗಳು ಎಲ್ಲರಿಗೂ ತಿಳಿಯುವಂತೆ ಪುರಾಣ ಹೇಳುವ ಕಲೆಯನ್ನು ಮೈಗೂಡಿಸಿಕೊಂಡಿದ್ದರು. ಪುರಾಣ ಹೇಳುವಾಗ ನಡುನಡುಕ ಮುಖ್ಯ ವಿಚಾರಕ್ಕೆ ಪೂರಕವಾಗಿರುವಂತೆ ಉಪಕಥೆಗಳನ್ನು ಹೇಳಿ ಜನರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಅವರಲ್ಲಿ ಕೇಳುಗರನ್ನು ಹಿಡಿದಿಡುವ ಚುಂಬಕ ಶಕ್ತಿಯಿತ್ತು. ಇದರಿಂದಾಗಿ ಅವರು ನಡೆಸಿಕೊಡುವ ಪುರಾಣ ಪ್ರವಚನಗಳನ್ನು ಕೇಳಲು ಜನರು ನೀರಿನಂಗೆ ಹರಿದು ಬರುತ್ತಿದ್ದರು. ಈ ದಿನವೂ ಸಹ ಪಂಚಯ್ಯಸ್ವಾಮಿಗಳು ತಿಂಗಳು ಪರ್ಯಂತ ನಡೆಸಿಕೊಡಲಿರುವ 'ಬಸವ ಪುರಾಣ'ದ ಉದ್ಘಾಟನಾ ಕಾರ್ಯಕ್ರಮಕ್ಕೆ ಹಾರೀಗೇರಿ ಊರಿನ ಅಕ್ಕಪಕ್ಕದ ಹಳ್ಳಿಯ ಜನರು ಎತ್ತಿನಗಾಡಿ, ಸೈಕಲ್ಲು ಹಾಗೂ ಟಂಟಂಗಳಲ್ಲಿ ಆಗಮಿಸುತ್ತಿದ್ದರು. ಹೀಗೆ ಬಂದು ಸೇರುತ್ತಿದ್ದ ಜನರಿಗೆ ಕಾರ್ಯಕ್ರಮ ಮುಗಿದ ಮೇಲೆ ಅನ್ನ ಸಂತರ್ಪಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು. ಒಟ್ಟನಲ್ಲಿ ವಿರಕ್ತ ಮಠದ ಆವರಣವು ಜನರಿಂದ ತುಂಬಿ ತುಳುಕುತ್ತಿತ್ತು. ಒಂದು ತೆರದಲಿ ಅಲ್ಲಿ ಸಂಭ್ರಮ ಮನೆ ಮಾಡಿತ್ತು. ಇನ್ನು ಆ ಸಂಭ್ರಮವನ್ನು ಹೆಚ್ಚಿಸಲೆಂಬಂತೆ ಮಠವನ್ನು ಸಿಂಗರಿಸಲಾಗಿತ್ತು.

ಮಠದ ಪ್ರವೇಶ ದ್ವಾರದ ಮುಂದೆ ನಾಕೂ ಮೂಲೆಗೆ